ಓ.ಎಸ್.ನಂಃ 152/2023

ಡಿಡಬ್ಲ್ಯೂ–1

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 11.06.2026 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದಃ**

ವಾದಿ ನನಗೆ ಗೊತ್ತಿಲ್ಲ. ನನ್ನ ತಂದೆ ಹೆಸರು ಸಿದ್ದೇಗೌಡ. ನನ್ನ ತಾಯಿ ಹೆಸರು ಮಹದೇವಮ್ಮ. ನನ್ನ ತಂದೆ ತಾಯಿಗೆ ನಾನು ಒಬ್ಬಳೆ ಮಗಳು. ನನ್ನ ತಾತನ ಹೆಸರು ಸಿದ್ದೇಗೌಡ. ನನ್ನ ತಂದೆಯ ಗ್ರಾಮ ಕಲ್ಲೀಗೌಡನಹಳ್ಳಿ, ನನ್ನ ತಾಯಿಯ ತಂದೆ ಹೆಸರು ಸಿದ್ದೇಗೌಡ. ನನ್ನ ತಾಯಿಯ ತಾತನ ಹೆಸರು ಪುಟ್ಟೇಗೌಡ. ದಾವಾ ಸ್ವತ್ತುಗಳು ಮೂಲತಃ ನನ್ನ ತಾಯಿ ಮನೆಗೆ ಸೇರಿದವು. ಅವುಗಳು ನನ್ನ ತಾಯಿಯ ತಂದೆ ಹೆಸರಿನಲ್ಲಿ ಇತ್ತು. ನನ್ನ ತಾಯಿಯ ತಂದೆ ಸಿದ್ದೇಗೌಡ ಬಿನ್ ಪುಟ್ಟೇಗೌಡರವರ ಹೆಸರಿನಲ್ಲಿ ದಾವಾ ಸ್ವತ್ತುಗಳು ನಮೂದು ಇದ್ದವು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ದಾವಾ ಸ್ವತ್ತುಗಳು ಈಗ ನನ್ನ ಹೆಸರಿನಲ್ಲಿ ಖಾತಾ ಆಗಿದೆ. ನನ್ನ ತಾಯಿಯ ಸಂಬಂಧದಿಂದ ದಾವಾ ಸ್ವತ್ತುಗಳು ನನ್ನ ಹೆಸರಿಗೆ ವರ್ಗಾವಣೆಯಾಯಿತು. ನನ್ನ ತಾಯಿಯ ಕಡೆಯಿಂದ ದಾವಾ ಸ್ವತ್ತುಗಳು ಯಾವ ರೂಪದಲ್ಲಿ ನನ್ನ ಹೆಸರಿಗೆ ವರ್ಗಾವಣೆಯಾದವು ಎಂಬ ಪ್ರಶ್ನೆಗೆ ಸಾಕ್ಷಿ ಸಮಂಜಸವಾಗಿ ಉತ್ತರ ನೀಡಿರುವುದಿಲ್ಲ.

ನಾನು ಕಲ್ಲೀಗೌಡನಹಳ್ಳಿಯಲ್ಲಿ ವಾಸವಿದ್ದೇವೆ. ನಾನು ಹೊಸ ಮನೆಯನ್ನು ನಿರ್ಮಿಸಿಲ್ಲ. ನನ್ನ ಗಂಡನ ಹೆಸರು ಶಿವಣ್ಣ. ಈಗ ನಾನು ನನ್ನ ಗಂಡನ ಮನೆಯಲ್ಲಿ ವಾಸವಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ನನ್ನ ಗಂಡನನ್ನು ದತ್ತಕಕ್ಕೆ ಪಡೆದುಕೊಂಡಿದ್ದರು ಎಂಬ ಬಗ್ಗೆ ದಾಖಲೆ ಇದೆ, ಆದರೆ ಅದು ಈಗ ಇಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಬಲ್ಲೆ. ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪಂದಿರ ಸ್ವತ್ತುಗಳು ಇವೆ ಎಂದರೆ ಸರಿ. ಸಿದ್ದೇಗೌಡರಿಗೆ ನಾನು ಮತ್ತು ವಾದಿ ಇಬ್ಬರು ಸಹ ಮಕ್ಕಳು ಎಂದರೆ ಸರಿಯಲ್ಲ. ನನ್ನ ತಂದೆ ಜೊತೆ ಜನಿಸಿದ್ದ ಮಹದೇವಸ್ವಾಮಿ ಮತ್ತು ಬಸವರಾಜು ರವರು ಬದುಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ಜೊತೆ ಒಟ್ಟು ಮೂರು ಜನ ಜನಿಸಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಯ ಸಹೋದದರು ಎಷ್ಟು ಜನ ಜೀವಂತವಾಗಿದ್ದಾರೆ ಮತ್ತು ಎಷ್ಟು ಜನ ಮರಣ ಹೊಂದಿದ್ದಾರೆ ಎಂದು ಹೇಳಲಾಗುವುದಿಲ್ಲ. ನನ್ನ ಹೆಸರಿಗೆ ದಾವಾ ಸ್ವತ್ತುಗಳು ಖಾತಾ ಆಗುವ ಮೊದಲು ನನ್ನ ತಂದೆ ಹೆಸರಿಗೆ ಖಾತಾ ಆಗಿತ್ತು ಎಂದರೆ ಸರಿಯಲ್ಲ. ವಾದಿ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ನನ್ನ ವಿರುದ್ಧವಾಗಿ ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ನಾನು ವಿಭಾಗ ಕೊಡುತ್ತೇನೆ ಎಂದು ಹೇಳಿದ ಕಾರಣ ವಾದಿ ಹಿಂದಿನ ದಾವೆಯನ್ನು ವಾಪಸ್ಸು ಪಡೆದಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ತಂದೆಯ ಕುಟುಂಬಕ್ಕೆ ಸೇರಿದ್ದಲ್ಲ ಮತ್ತು ವಾದಿಗೂ ನನಗೂ ಸಂಬಂಧ ಇಲ್ಲ ಎಂದು ನನ್ನ ತಂದೆಯ ಕುಟುಂಬದವರನ್ನು ಕರೆಸಿ ಸಾಕ್ಷಿ ಹೇಳಿಸಲು ಸಾಕ್ಷಿ ಹೇಳಲು ಆಗುವುದಿಲ್ಲ.

ನನ್ನ ತಾಯಿ ಕುಟುಂಬದವರನ್ನು ಕರೆಸಿ ನನ್ನ ತಂದೆಯನ್ನು ದತ್ತಕಕ್ಕೆ ಪಡೆದಿದ್ದರು ಮತ್ತು ದಾವಾ ಸ್ವತ್ತುಗಳು ನನ್ನ ತಾಯಿಯ ಮನೆಯ ಕಡೆಯಿಂದ ಬಂದ ಸ್ವತ್ತುಗಳು ಎಂದು ಸಾಕ್ಷಿ ಹೇಳಿಸಬಲ್ಲೆ. ದಾವಾ ಸ್ವತ್ತುಗಳಲ್ಲಿ ವಾದಿ ಮತ್ತು ನಾನು ಜಂಟಿಯಾಗಿ ಸ್ವಾಧೀನದಲ್ಲಿದ್ದು ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು ನನ್ನ ತಂದೆ ಮರಣ ಹೊಂದಿದ ನಂತರ ವಾದಿಯ ಗಮನಕ್ಕೆ ಬಾರದೆ ನಾನೇ ಖಾತಾ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಮನೆಯವರು ನನ್ನ ಗಂಡನನ್ನು ದತ್ತಕಕ್ಕೆ ಪಡೆದಿಲ್ಲದಿದ್ದರು ದಾವಾ ಸ್ವತ್ತನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮದುವೆಯಾಗಿ ತನ್ನ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ.

ವಾದಿ ಮತ್ತು ನಾನು ಈ ಹಿಂದೆ ಚೆನ್ನಾಗಿದ್ದೇವು. ಭಾಗ ಕೇಳಿದ ನಂತರ ನನ್ನ ಮತ್ತು ವಾದಿಯ ಸಂಬಂಧ ಹದಗೆಟ್ಟಿದೆ ಎಂದರೆ ಸರಿಯಲ್ಲ. ವಾದಿಯ ಅಳಿಯ ಮತ್ತು ಗಂಡನಿಗೆ ಗಲಾಟೆಯಾದಾಗ ನಾನು ನನ್ನ ತಂಗಿಯ ಗಂಡ ಎಂದು ಜಮೀನಿಗೆ ದಾಖಲೆ ನೀಡಿದ್ದೆ ಎಂದರೆ ಸರಿ. ನಂತರ ನಾನು ಸ್ವಲ್ಪ ಹಣ ಕೊಡುತ್ತೇನೆ ನೀನು ಬೇರೆ ಕಡೆ ಸ್ವತ್ತುಗಳನ್ನು ಖರೀದಿ ಮಾಡು ಎಂದು ವಾದಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಸಿದ್ದೇಗೌಡರ ಮಕ್ಕಳಾಗಿದ್ದು, ವಾದಿಗೂ ಸಹ ದಾವಾ ಸ್ವತ್ತಿನಲ್ಲಿ ಸಮಾನ ಭಾಗ ಇದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಲ್ಲಿ ಬಂದ ಆದಾಯವನ್ನು ನಾನು ಮತ್ತು ವಾದಿ ಸಮಾನಾಗಿ ಹಂಚಿಕೊಳ್ಳುತಿದ್ದೇವು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ